ವಿಕಾಸಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಈ ಸಂಸ್ಥೆಗಳಲ್ಲಿ ಇದುವರೆಗೆ ಅಧ್ಯಯನ ಮಾಡಿರುವ ಒಂಬತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ ಬಹುಮಂದಿ ಇಂದು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಉನ್ನತ ಪದವಿಗಳನ್ನು ಅಲಂಕರಿಸಿ, ಸಮಾಜಕ್ಕೆ ಸ್ತುತ್ಯವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಲ್ಲಿ ಕೇವಲ ಶ್ರೀಮಂತ ವಿದ್ಯಾರ್ಥಿಗಳು ಮಾತ್ರ ಓದುತ್ತಿದ್ದಾರೆ ಎನ್ನುವ ಭಾವನೆ ಖಂಡಿತ ತಪ್ಪು. ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇ. ೫೦ರಷ್ಟು, ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮೀಸಲಾತಿ ಇದೆ. ಇದಲ್ಲದೆ, ಶೈಕ್ಷಣಿಕವಾಗಿ ಬುದ್ಧಿವಂತರಾಗಿದ್ದು, ವರಮಾನ ಕಡಮೆ ಇರುವ ಕುಟುಂಬಗಳಿಂದ ಬಂದಿರುವ ವಿದ್ಯಾರ್ಥಿಗಳಿಗೆ ಹಲವಾರು ರೀತಿಯ ವಿದ್ಯಾರ್ಥಿವೇತನವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೆ, ಸಮಾಜದ ಉಪೇಕ್ಷಿತ ಜನರ ಸೇವೆ ಮಾಡಲು ಮಕ್ಕಳನ್ನು ಹುರಿದುಂಬಿಸುವ 'ನಾರಾಯಣ ಸೇವೆ' ಅಥವಾ 'Friends of the Poor' ಎಂಬ ಸೇವಾಕಾರ್ಯಕ್ರಮವನ್ನೂ ನಡೆಸಲಾಗುತ್ತಿದೆ. ಬಿ.ಎಡ್. ವಿದ್ಯಾರ್ಥಿಗಳಿಗೆ 'ಮೌಲ್ಯಶಿಕ್ಷಣ' ವನ್ನು ಕಡ್ಡಾಯಗೊಳಿಸಲಾಗಿದೆ. ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಗ್ರಾಮೀಣ ಮತ್ತು ಬಡ ಮಕ್ಕಳಿಗಾಗಿ ಅನೇಕ ಚಾರಿತ್ರ್ಯವರ್ಧನ ಶಿಬಿರಗಳನ್ನು ಕೂಡ ನಡೆಸಲಾಗುವುದು. ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ಶ್ರೀರಾಮಕೃಷ್ಣ ವಿದ್ಯಾಕೇಂದ್ರವು ರಾಮಕೃಷ್ಣ – ವಿವೇಕಾನಂದ ವಿಚಾರಧಾರೆಯಿಂದ ಪ್ರಭಾವಿತರಾಗಿರುವ ಭಕ್ತಜನರು ನಡೆಸುತ್ತಿರುವ ಒಂದು ವಿಶಿಷ್ಟ ಮಾದರಿ ಶೈಕ್ಷಣಿಕ ಸಂಸ್ಥೆಯಾಗಿದೆ.

**ವಿವೇಕ ಶಿಕ್ಷಣ :** ಮೇಲಿನ ಶಿಕ್ಷಣ ಸಂಸ್ಥೆಗಳಲ್ಲದೆ ಆಶ್ರಮವು, ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುತ್ತಿದ್ದು, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಆಯ್ದ ಮಕ್ಕಳಿಗಾಗಿ ಮೈಸೂರಿನ ಕುಂಬಾರಕೊಪ್ಪಲು ಮತ್ತು ಕೃಷ್ಣಮೂರ್ತಿಪುರಂ ಪ್ರದೇಶಗಳಲ್ಲಿ 'ವಿವೇಕ ಶಿಕ್ಷಣ' ಎಂಬ ಉಚಿತ ತರಗತಿಗಳನ್ನು, ಕಳೆದ ೧೩ ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ಇದರಲ್ಲಿ ೯ ಮತ್ತು ೧೦ನೆಯ ತರಗತಿಯ ಮಕ್ಕಳಿಗೆ ಇಂಗ್ಲಿಷ್, ವಿಜ್ಞಾನ, ಗಣಿತ ವಿಷಯಗಳಲ್ಲಿ ವಿಶೇಷ ತರಗತಿಗಳನ್ನು ಪ್ರತಿದಿನವೂ ನಡೆಸಲಾಗುತ್ತಿದೆ. ಹಾಗೂ ಅಗತ್ಯವಿರುವ ಎಲ್ಲಾ ಶಿಕ್ಷಣ ಸಾಮಗ್ರಿಗಳನ್ನೂ ಉಚಿತವಾಗಿ ವಿತರಿಸಲಾಗುತ್ತಿದೆ. ಇದಲ್ಲದೆ, ಪ್ರತಿ ಬುಧವಾರದಂದು ಮಕ್ಕಳು ಆಶ್ರಮಕ್ಕೆ ಬಂದು ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ತರಗತಿಗಳಿಗೆ ನಿಯಮಿತವಾಗಿ ಬರುವ ಮಕ್ಕಳಲ್ಲಿ ಶೇ.೯೦ಕ್ಕೂ ಹೆಚ್ಚು ಮಕ್ಕಳು ಪ್ರತಿ ವರ್ಷ ತೇರ್ಗಡೆ ಆಗುವುದಲ್ಲದೆ, ಅತಿ ಹೆಚ್ಚು ಅಂಕಗಳನ್ನು ಪಡೆಯುತ್ತಿದ್ದಾರೆ ಎನ್ನುವುದು ಹೆಮ್ಮೆಯ ಸಂಗತಿ. ಈ ಕಾರ್ಯಕ್ರಮದಡಿ ಈಗಾಗಲೇ ೩,೫೦೦ಕ್ಕೂ ಹೆಚ್ಚು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿದ್ದಾರೆ. ಪ್ರಸ್ತುತ ವರ್ಷದಲ್ಲಿ ಸುಮಾರು ೪೨೫ ಮಕ್ಕಳು ಈ ಯೋಜನೆಯಡಿ ವಿಶೇಷ ನೆರವಿನ ಶಿಕ್ಷಣ ಪಡೆಯುತ್ತಿದ್ದಾರೆ.

**ಜ್ಞಾನವಾಹಿನಿ :** ಇದು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಸಂಚಾರಿ ಜ್ಞಾನಪ್ರಸಾರ ಅಭಿಯಾನ. ಕಳೆದ ೯ ವರ್ಷಗಳಲ್ಲಿ, ೨೮ ಜಿಲ್ಲೆಗಳ ೫೦೦ಕ್ಕೂ ಹೆಚ್ಚು ಗ್ರಾಮಗಳನ್ನು ಈ ಅಭಿಯಾನ ಕ್ರಮಿಸಿದೆ. ಸುಮಾರು ೨ ಲಕ್ಷಕ್ಕೂ ಹೆಚ್ಚಿನ ಗ್ರಾಮೀಣ ಹಾಗೂ ಸಣ್ಣ ಊರುಗಳ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಸ್ವಾಮಿ ವಿವೇಕಾನಂದರ ಮೂರ್ತಿಯ ಮೆರವಣಿಗೆ, ಶಾಲಾಕಾಲೇಜುಗಳಲ್ಲಿ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ, ಆಶ್ರಮದ ಪುಸ್ತಕಗಳ ಮಾರಾಟ, ಚಲನಚಿತ್ರ ಪ್ರದರ್ಶನ – ಇವು ಈ ಕಾರ್ಯಕ್ರಮದ ಮುಖ್ಯಾಂಶಗಳು.

**ನೀತಿ ಶಿಕ್ಷಣ ತರಗತಿಗಳು :** ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಅಂಗವಾಗಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ವತಿಯಿಂದ, ಭಾರತದಾದ್ಯಂತ ನೂರಾರು ಶಾಲೆಗಳಲ್ಲಿ ೬ ರಿಂದ ೧೧ನೇ ತರಗತಿಯ ಮಕ್ಕಳಿಗಾಗಿ ನೀತಿಶಿಕ್ಷಣ ತರಗತಿಗಳನ್ನು ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಈ ವರ್ಷ ೩೦೦ ಶಾಲೆಗಳಲ್ಲಿ ೧೧ ಸಾವಿರಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಅವರಿಗೆ ನೀತಿ ಶಿಕ್ಷಣದ ಬಗೆಗಿನ ಉಚಿತ ಪಠ್ಯಪುಸ್ತಕ, ನೋಟ್‌ಪುಸ್ತಕಗಳು ಮುಂತಾದವನ್ನು ವಿತರಿಸಲಾಗಿದೆ.

**ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಶಿಬಿರಗಳು :** ಆಶ್ರಮದಲ್ಲಿ ಬೇಡಿಕೆಗೆ ಅನುಸಾರವಾಗಿ ವರ್ಷಕ್ಕೆ ಹಲವಾರು ಸಲ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರಗಳು ನಡೆಯುತ್ತಿವೆ. ಅದಲ್ಲದೆ, ಜಿಲ್ಲಾ ಶಿಕ್ಷಣಾಧಿಕಾರಿಗಳ ಕಛೇರಿಯ ಸಹಕಾರದೊಂದಿಗೆ ಪ್ರತಿ ತಿಂಗಳೂ ಸುಮಾರು ೧೦೦ ಶಿಕ್ಷಕರಿಗೆ ಒಂದು ದಿನದ ಮೌಲ್ಯಶಿಕ್ಷಣ ತರಬೇತಿ ಶಿಬಿರ ಕೂಡ ನಡೆಯುತ್ತಲಿದೆ.

**ಶ್ರೀಶಾರದಾ ಜ್ಞಾನಸುಧಾ ರಸಪ್ರಶ್ನೆ ಕಾರ್ಯಕ್ರಮ:** ಮಕ್ಕಳಲ್ಲಿ ಉದಾತ್ತ ಚಿಂತನೆಗಳನ್ನು ಬಿತ್ತಲು ೨೦೦೪ ರಿಂದ ರಾಜ್ಯಾದ್ಯಂತ ಇರುವ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಏರ್ಪಡಿಸುತ್ತ ಬಂದಿದೆ. ಇದುವರೆಗೆ ೬,೨೦,೦೦೦ ವಿದ್ಯಾರ್ಥಿಗಳು, ಆಶ್ರಮವು ಕೊಡುವ ವ್ಯಕ್ತಿತ್ವ ವಿಕಾಸ, ಚಾರಿತ್ರ್ಯ ವರ್ಧನೆಯ ಪುಸ್ತಕಗಳನ್ನು ಓದಿ, ಪ್ರಶ್ನೆಗಳಿಗೆ ಉತ್ತರ ಬರೆದಿದ್ದಾರೆ. ಕಳೆದ ವರ್ಷ ೬೨,೦೦೦ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡಿದ್ದರು. ಈ ವರ್ಷವೂ ಈ ಕಾರ್ಯಕ್ರಮ ಈಗಾಗಲೇ ಆರಂಭಗೊಂಡಿದೆ.

**ಸ್ವಾಮೀಜಿಯವರ ಪ್ರವಾಸ :** ಆಶ್ರಮದ ಸ್ವಾಮೀಜಿಯವರು ವಿವಿಧ ಸ್ಥಳಗಳಲ್ಲಿನ ಧಾರ್ಮಿಕ ಹಾಗೂ ಶಿಕ್ಷಣಸಂಸ್ಥೆಗಳಿಗೆ ಭೇಟಿ ನೀಡಿ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಉದ್ದೇಶಿಸಿ ಪ್ರವಚನ ನೀಡುತ್ತಾರೆ. ಇದರಿಂದ ಸಾವಿರಾರು ಜನ ಪ್ರೇರಣೆ ಪಡೆಯುತ್ತಾರೆ.

**೪. ಮಾನವೀಯ ಸೇವೆ :** ರಾಮಕೃಷ್ಣ ಮಿಷನ್ ಮಾನವೀಯ ಸೇವೆಗೆ ಬಹಳ ಪ್ರಾಮುಖ್ಯತೆ ನೀಡುತ್ತ ಬಂದಿದೆ. ಪ್ರತಿವರ್ಷ ಕೋಟ್ಯಂತರ ರೂಪಾಯಿಗಳನ್ನು ಇಂತಹ ಸೇವಾಕಾರ್ಯಗಳಿಗಾಗಿ ವಿನಿಯೋಗಿಸಲಾಗುತ್ತಿದೆ. ಮೈಸೂರು ಆಶ್ರಮವು ಹಲವಾರು ಗ್ರಾಮೋದ್ಧಾರ ಕಾರ್ಯ ಕ್ರಮಗಳನ್ನು ಬಿಳಿಗಿರಿರಂಗನ ಬೆಟ್ಟದಲ್ಲಿ ನಡೆಸಿದೆ. ಚಾಮರಾಜನಗರ ಜಿಲ್ಲೆಯ ತೆಂಕನಮೊಳೆ ಎಂಬ ಗ್ರಾಮದಲ್ಲಿ ಅನಾಶ್ರಿತರಿಗೆ ೧೭೬ ಮನೆಗಳನ್ನು ಉಚಿತವಾಗಿ ಕಟ್ಟಿಸಿಕೊಡಲಾಗಿದೆ. ೨೦೦೯ರಲ್ಲಿ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಭಾರೀ ಮಳೆ ಮತ್ತು ಪ್ರವಾಹ ಬಂದಾಗ, ಮೈಸೂರು ಆಶ್ರಮವು, ಬೆಳಗಾವಿಯ ಆಶ್ರಮದ ಜೊತೆಗೂಡಿ ಪರಿಹಾರ ಕಾರ್ಯವನ್ನು ನಡೆಸಿತು. ಇದಲ್ಲದೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಚಿಂತಮನದೊಡ್ಡಿ ಗ್ರಾಮದಲ್ಲಿ ೧೪೩ ಮನೆಗಳನ್ನೂ ಕಟ್ಟಿಸಿಕೊಡುವಲ್ಲಿ ಮಹತ್ತರ ಪಾತ್ರ ವಹಿಸಿತ್ತು. ಇದಲ್ಲದೆ, ಆಶ್ರಮವು ಆಟೋಚಾಲಕರಿಗಾಗಿ, ಚಮ್ಮಾರ ಬಂಧುಗಳಿಗಾಗಿ, ಕೊಳಚೆಗೇರಿ ನಿವಾಸಿಗಳಾಗಿ ವಿಶೇಷ ಆಧ್ಯಾತ್ಮಿಕ ಶಿಬಿರಗಳನ್ನು ನಡೆಸಿ, ಅವರಿಗೆ ವಸ್ತ್ರದಾನ, ಅನ್ನದಾನಗಳನ್ನು ನೀಡಿದೆ.

**ಪೌಷ್ಟಿಕ ಆಹಾರ ಮತ್ತು ಮೂಲಭೂತ ಸಲಕರಣೆಗಳ ವಿತರಣೆ:** ಆಶ್ರಮವು ತನ್ನ 'ಗದಾಧರ ಪ್ರಕಲ್ಪ' ಯೋಜನೆಯ ಅಡಿಯಲ್ಲಿ, ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ೧೨ ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ, ಕೇಂದ್ರ ಸರ್ಕಾರದ ಅನುದಾನವನ್ನು ಉಪಯೋಗಿಸಿಕೊಂಡು, ಅತ್ಯಗತ್ಯವಾದ ಹಾಲು, ಪೌಷ್ಟಿಕ ಆಹಾರ, ತೆಂಗಿನೆಣ್ಣೆ, ಪಾದರಕ್ಷೆ, ಶಿಕ್ಷಣ ಸಾಮಗ್ರಿಗಳು – ಮುಂತಾದವುಗಳನ್ನು ವಿತರಣೆ ಮಾಡುತ್ತಿದೆ. ಈ ಕಾರ್ಯಕ್ರಮದಡಿ ಈ ವರ್ಷ ಸುಮಾರು ೨೦೦ ಮಕ್ಕಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

(ಸಂಗ್ರಹ)



# ಸ್ವಾಮಿ ವಿವೇಕಾನಂದರು ನಿರೂಪಿಸಿದ
# ನೀತಿಕಥೆಗಳು



ಡಾ. ಕೆ. ಅನಂತರಾಮು

## ಬೆರಗುಗೊಳಿಸಿದ ಮಂತ್ರವಾದಿ

**ಮ**ನುಷ್ಯನು ಗಳಿಸಿಕೊಳ್ಳಬಹುದಾದ ಶಕ್ತಿಗೆ ಒಂದು ಮಿತಿಯೆಂಬುದೇ ಇಲ್ಲ, ಒಂದು ಅಂತ್ಯವೆಂಬುದೇ ಇಲ್ಲ. ಯಾವುದನ್ನಾದರೂ ಕೈವಶ ಮಾಡಿಕೊಳ್ಳಬೇಕೆಂಬ ಆಸಕ್ತಿ ಕೆರಳಿಬಿಟ್ಟರೆ ಸರಿ, ಅದರಲ್ಲಿಯೇ ಅವನು ತಲ್ಲೀನನಾಗಿ ಉಳಿದೆಲ್ಲವನ್ನೂ ಮರೆತುಬಿಡುತ್ತಾನೆ. ಯಾರು ತಮ್ಮ ಮನಸ್ಸನ್ನು ನಿಯಂತ್ರಿಸಬಲ್ಲರೋ ಅಂತಹವರು ಇತರರ ಮನಸ್ಸನ್ನೂ ನಿಯಂತ್ರಿಸಬಲ್ಲವರಾಗಿರುತ್ತಾರೆ. ಒಂದು ಹಿಡಿ ಮಣ್ಣಿನ ಗುಣಲಕ್ಷಣಗಳನ್ನು ನಿಖರವಾಗಿ ಅರಿತವರು ಜಗತ್ತಿನ ಮಣ್ಣನ್ನೆಲ್ಲವನ್ನೂ ಅರಿತವರಾಗುತ್ತಾರೆ. ತಮ್ಮ ಮನಸ್ಸನ್ನು ಅರಿತುಕೊಂಡವರಿಗೆ ಎಲ್ಲ ಮನಸ್ಸುಗಳ ರಹಸ್ಯವೂ ಗೊತ್ತಾಗುತ್ತದೆ, ಎಲ್ಲ ಮನಸ್ಸುಗಳ ಮೇಲೂ ಅವರಿಗೆ ಅಧಿಕಾರ ಪ್ರಾಪ್ತವಾಗುತ್ತದೆ.

ಕೋಲ್ಕತಾ ಮಹಾನಗರದಲ್ಲಿ ಅಪೂರ್ವ ಶಕ್ತಿಸಂಪನ್ನನಾದ ಸಖಾರಾಮನೆಂಬ ಮಂತ್ರವಾದಿಯೊಬ್ಬನಿದ್ದನು. ಯಾರಾದರೂ ವ್ಯಕ್ತಿಗಳು ತಮ್ಮ ಮನಸ್ಸಿನಲ್ಲಿಯೇ ಯಾವುದಾದರೂ ಪ್ರಶ್ನೆಗಳನ್ನಿಟ್ಟುಕೊಂಡು ಹೋದರೆ ಸಖಾರಾಮನು, "ನೀವು ಇಂತಹ ಪ್ರಶ್ನೆಗಳನ್ನಿಟ್ಟುಕೊಂಡು ಬಂದಿದ್ದೀರಲ್ಲವೇ, ಅವುಗಳಿಗೆ ನೋಡಿಕೊಳ್ಳಿ, ಇದೇ ಉತ್ತರ" ಎಂದು ಪ್ರಶ್ನೆಗಳನ್ನೂ ಉತ್ತರಗಳನ್ನೂ ನಿರ್ದಿಷ್ಟವಾಗಿ ಹೇಳಿಬಿಡುತ್ತಿದ್ದನು. ಅವನು ವ್ಯಕ್ತಿಗಳ ಭವಿಷ್ಯವನ್ನು ಮುಖ ನೋಡಿಯೇ ಹೇಳಬಲ್ಲವನೂ ಆಗಿದ್ದನು. ಸ್ವಾಮಿ ವಿವೇಕಾನಂದರಿಗೆ ಅವನ ವಿಚಾರ ಒಮ್ಮೆ ಕಿವಿಗೆ ಬಿತ್ತು. ಯುವಕರಾಗಿದ್ದ ಅವರು, ಕುತೂಹಲವನ್ನು ತಡೆಯಲಾರದೆ ಆತನನ್ನು ಪ್ರತ್ಯಕ್ಷವಾಗಿಯೇ ನೋಡಬೇಕು, ಅವನಲ್ಲಿರುವ ಅಪೂರ್ವವಾದ ವಿದ್ಯೆಗಳನ್ನು ತಿಳಿಯಬೇಕು ಎಂದು ಇಬ್ಬರು ಗೆಳೆಯರನ್ನು ಕೂಡಿಕೊಂಡು ಸಖಾರಾಮನ ಬಳಿಗೆ ಹೋದರು. ತಾವು ಕೇಳಬೇಕೆಂದಿರುವ ಪ್ರಶ್ನೆಗಳು ಗಲಿಬಿಲಿಯಾಗದಂತಿರಲಿ, ಮರೆತುಹೋಗದಂತಿರಲಿ ಎಂದು ಮೂವರೂ ತಂತಮ್ಮ ಪ್ರಶ್ನೆಗಳನ್ನು ಒಂದೊಂದು ಚೀಟಿಯಲ್ಲಿ ಬರೆದು ಅದನ್ನು ತಮ್ಮ ಜೇಬಿನೊಳಗೆ ಇಟ್ಟುಕೊಂಡರು. ಎಲ್ಲರೂ ಮಂತ್ರವಾದಿ ಸಖಾರಾಮನ ಮನೆಯನ್ನು ಹೊಕ್ಕು ಕುಳಿತರು.

ಮಂತ್ರವಾದಿಯು ವಿವೇಕಾನಂದರೇ ಆದಿಯಾಗಿ ಎಲ್ಲರ ಮುಖಗಳನ್ನೂ ನೋಡಿದನು. ಆಮೇಲೆ ಒಬ್ಬೊಬ್ಬರೂ ಕೇಳಬೇಕೆಂದು ಬರೆದುಕೊಂಡು ಬಂದಿದ್ದ ಪ್ರಶ್ನೆಯನ್ನೂ ತಾನೇ ಹೇಳಿ, ಅದಕ್ಕೆ ತಕ್ಕ ಉತ್ತರ ಕೊಟ್ಟು ಎಲ್ಲರನ್ನೂ ಬೆರಗುಗೊಳಿಸಿದನು. ಆಮೇಲೆ ಸಖಾರಾಮನು ತಾನೇ ಒಂದು ಚೀಟಿಯಲ್ಲಿ ಏನನ್ನೋ ಬರೆದು, ಅದನ್ನು ನಾಲ್ಕು ಮಡಿಕೆಮಾಡಿ ಅದರ ಮೇಲೆ, 'ಇಲ್ಲಿ ಸಹಿ ಮಾಡು' ಎಂದು ವಿವೇಕಾನಂದರ ಸಹಿ ಹಾಕಿಸಿದನು. "ಇದನ್ನು ನಿನ್ನ ಜೇಬಿನಲ್ಲಿಟ್ಟುಕೊಂಡಿರು, ಬಿಚ್ಚಿ ನೋಡಬೇಡ, ನೀನು ಈಗಲೇ ಮುಂದಕ್ಕೆ ಕೇಳುವ ಪ್ರಶ್ನೆ ಮತ್ತು ಅದಕ್ಕೆ ಉತ್ತರವನ್ನು ನಾನು ಅದರಲ್ಲಿ ಬರೆದಿದ್ದೇನೆ" ಎಂದು ಹೇಳಿದನು. ವಿವೇಕಾನಂದರೊಡನಿದ್ದ ಇಬ್ಬರು ಗೆಳೆಯರ ಮೇಲೂ ಹಾಗೆಯೇ ಚೀಟಿಯ ಪ್ರಯೋಗವನ್ನು ಮಾಡಿದನು. ಆಮೇಲೆ ಮಂತ್ರವಾದಿಯು, "ನಿಮ್ಮ ಜೀವಮಾನದಲ್ಲಿ ಮುಂದಕ್ಕೆ



ಇಂತಿಂಥ ಘಟನೆಗಳು ನಡೆಯುತ್ತವೆ" ಎಂದು ಸ್ವಲ್ಪಹೊತ್ತು ಆ ಮೂವರ ಮುಖಗಳನ್ನೇ ನೋಡುತ್ತ ಭವಿಷ್ಯವಾಣಿ ನುಡಿದನು.

ತರುವಾಯ ಸಖಾರಾಮನು ವಿವೇಕಾನಂದರನ್ನು ಕುರಿತು, "ನಿನ್ನ ಮನಸ್ಸಿಗೆ ಬಂದ ಭಾಷೆಯಲ್ಲಿ ನೀನು ಯಾವುದಾದರೊಂದು ಪದವನ್ನೋ, ವಾಕ್ಯವನ್ನೋ ನೆನೆಪಿಸಿಕೊ" ಎಂದು ಹೇಳಿದನು. ಆಗ ವಿವೇಕಾನಂದರು ಆ ಮಂತ್ರವಾದಿಗೆ ಪರಿಚಯವಿರದ ದೊಡ್ಡದೊಂದು ಸಂಸ್ಕೃತವಾಕ್ಯವನ್ನು ತಮ್ಮ ಮನಸ್ಸಿಗೆ ತಂದುಕೊಂಡು "ಆಯಿತು" ಎಂದರು. ಆಮೇಲೆ ಸಖಾರಾಮನು, "ಈಗ ನಿನ್ನ ಜೇಬಿನಲ್ಲಿರುವ ನಾನು ಬರೆದುಕೊಟ್ಟಿದ್ದ ಕಾಗದವನ್ನು ಬಿಚ್ಚಿ ನೋಡು" ಎಂದನು. ಅಷ್ಟುಹೊತ್ತಿಗೆ ಒಂದು ಗಂಟೆಯಷ್ಟೇ ಕಾಲವು ಕಳೆದಿತ್ತು. ವಿವೇಕಾನಂದರು ಕಾಗದವನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಈ ವ್ಯಕ್ತಿಯು ನಾನು ಇಲ್ಲಿ ಬರೆದಿರು

ವುದನ್ನು ಆಲೋಚಿಸಿರುತ್ತಾನೆ ಎಂದು ಬರೆದಿತ್ತಲ್ಲದೆ, ಅವರು ಸ್ಮರಣೆಗೆ ತಂದುಕೊಂಡ ಸಂಸ್ಕೃತದ ವಾಕ್ಯವೂ ಬರೆದಿತ್ತು. ಆಮೇಲೆ ವಿವೇಕಾನಂದರ ಗೆಳೆಯರಲ್ಲಿ ಒಬ್ಬನನ್ನು ಕುರಿತು, “ಈಗ ನಿನ್ನ ಚೀಟಿಯನ್ನು ಬಿಚ್ಚಿನೋಡು” ಎಂದನು. ಅದರಲ್ಲಿ ಕಠಿಣವಾದ ಅರಬ್ಬಿಭಾಷೆಯ ಕೊರಾನಿನ ವಾಕ್ಯವೊಂದನ್ನು ಮಂತ್ರವಾದಿಯು ಬರೆದಿದ್ದನು. ಆ ವಾಕ್ಯವಾದರೋ ಆ ಗೆಳೆಯನು ತನ್ನ ಮನಸ್ಸಿನಲ್ಲಿ ಸ್ಮರಿಸಿಕೊಂಡದ್ದೇ ಆಗಿತ್ತು. ಮೂರನೆಯ ಗೆಳೆಯನು ಜರ್ಮನ್‌ಭಾಷೆಯ ವೈದ್ಯಶಾಸ್ತ್ರದ ಗ್ರಂಥದಿಂದ ಒಂದು ವಾಕ್ಯವನ್ನು ಸ್ಮರಿಸಿಕೊಂಡಿದ್ದನು. ಅವನು ಚೀಟಿಯನ್ನು ಬಿಚ್ಚಿ ನೋಡಿದಾಗ ಅದರಲ್ಲಿಯೂ ಆ ಜರ್ಮನ್ ವೈದ್ಯಶಾಸ್ತ್ರದ ವಾಕ್ಯವೇ ಬರೆದಿತ್ತು. ಈ ಘಟನೆಯಿಂದ ವಿವೇಕಾನಂದರು ವಿಸ್ಮಯಾಭಿಭೂತರಾಗಿಬಿಟ್ಟರು.

ಆ ಮಂತ್ರವಾದಿಯ ಸಮಕ್ಷಮದಿಂದ ಮರಳಿ ಬಂದಮೇಲೆ, “ನಾನೇನಾದರೂ ಆತನ ಸಾಮೀಪ್ಯದಲ್ಲಿ ಮೋಸಹೋದೆನೇ, ಏನಾದರೂ ಮಂಕುಬೂದಿ ಎರಚಿಸಿಕೊಂಡಿದ್ದೇನೇ” ಎಂಬ ಸಂಶಯ ವಿವೇಕಾನಂದರನ್ನು ಕಾಡತೊಡಗಿತು. “ಮತ್ತೆ ಆತನನ್ನು ಪರೀಕ್ಷಿಸಬೇಕು, ಆತನ ವಿಚಿತ್ರ ಶಕ್ತಿಯನ್ನು ದೃಢಪಡಿಸಿಕೊಳ್ಳಬೇಕು” ಎಂಬ ಜಿಜ್ಞಾಸೆಯಿಂದ ಪ್ರೇರಿತರಾಗಿ, ಹೊಸ ಗೆಳೆಯರನ್ನು ಕಟ್ಟಿಕೊಂಡು, ಸಖಾರಾಮನ ನಿವಾಸಕ್ಕೆ ಹೋದರು. ಆಗಲೂ ಆತನು ಎಂದಿನಂತೆಯೇ ಆಶ್ಚರ್ಯಕರವಾದ ಬಗೆಯಲ್ಲಿ ತನ್ನ ವಿದ್ಯೆಯನ್ನು ಪ್ರದರ್ಶಿಸಿ, ಅದ್ಭುತವಾದ ವಿಜಯವನ್ನು ಸಾಧಿಸಿದನು.

ಈ ಬಗೆಯ ಯೋಗಶಕ್ತಿಯನ್ನು ತಿಳಿಯಬಯಸುವವರು ವ್ಯವಹಾರ ಜೀವನಕ್ಕೆ ಬೇಕಾಗುವ ಸಂಕಲ್ಪಕ್ಕಿಂತಲೂ ಹೆಚ್ಚಿನ ಸಂಕಲ್ಪದಿಂದ ಹೊರಡಬೇಕು. ನಮ್ಮ ದೈನಂದಿನ ವ್ಯವಹಾರಕ್ಕೇ ಎಷ್ಟೊಂದು ಏಕಾಗ್ರತೆ ಬೇಕು! ಮನೆಯಲ್ಲಿ ತಂದೆ ತಾಯಿ ಬಂಧುಬಳಗ ಮಡದಿಮಕ್ಕಳು ಯಾರು ಸತ್ತರೂ ದಿನನಿತ್ಯದ ವ್ಯವಹಾರವನ್ನು ಮಾತ್ರ ನಿಲ್ಲಿಸುವಂತಿಲ್ಲ. ನಮ್ಮ ಹೃದಯವೇ ಶಿಥಿಲವಾಗುತ್ತಿದ್ದರೂ, ನಾವು ಯಮಯಾತನೆ ಅನುಭವಿಸುತ್ತಿದ್ದರೂ ನಮ್ಮ ನಿತ್ಯದ ಕಾರ್ಯಕ್ಷೇತ್ರವನ್ನು ಪ್ರವೇಶಿಸಲೇಬೇಕು. ಮನಸ್ಸನ್ನು ಕುರಿತ ಸಾಧನೆಯಾದರೋ ಇದಕ್ಕಿಂತ ಹೆಚ್ಚಿನ ಶ್ರಮವನ್ನು ಬಯಸುತ್ತದೆ. ಹಾಗೇನಾದರೂ ಅದರಲ್ಲಿಯೇ ತೊಡಗಿಕೊಂಡು ಸಾಧನೆ ಮಾಡಿಬಿಟ್ಟರೆ, ನಾವು ಪೂರ್ಣಾತ್ಮರೇ ಆಗಿ ಮುಕ್ತರಾಗಿಬಿಡಬಹುದು. ಒಂದು ವೇಳೆ ಅದು ಸಾಧ್ಯವಾಗದಿದ್ದರೂ, “ಈ ಯೋಗವು ಸತ್ಯವಾದುದು, ಅಲ್ಲಿನ ವಿಷಯಗಳನ್ನು ಸಾಕ್ಷಾತ್ಕಾರ ಮಾಡಿಕೊಂಡವರು ಇದ್ದಾರೆ” ಎಂಬುದನ್ನಾದರೂ ನಂಬಿ ಮನವರಿಕೆ ಮಾಡಿಕೊಳ್ಳಬಹುದು.

## ಶ್ವಾನರಾಜನ ಆನಂದಲೋಕ

**ಪ್ರ**ತಿಯೊಬ್ಬ ಮನುಷ್ಯನ ಸುಖದ ಕಲ್ಪನೆಯೂ ಬೇರೆಬೇರೆಯೇ ಆಗಿರುತ್ತದೆ. ಅನೇಕರು ಇಂದ್ರಿಯ ವಿಷಯಗಳಲ್ಲಿಯೇ ಆನಂದವನ್ನು ಕಂಡರೆ, ಕೆಲವರು ಮಾತ್ರ ಅತೀಂದ್ರಿಯವಾದ ಆನಂದವನ್ನು ಅರಸುತ್ತಾರೆ. ಅವರು ಆತ್ಮಸಾಕ್ಷಾತ್ಕಾರದ ಸಾಧನೆಯ ಮೂಲಕ ಬ್ರಹ್ಮಾನಂದಪರಾಯಣರಾಗುತ್ತಾರೆ. ವಿಜ್ಞಾನಿಗಳಾದವರು ಪ್ರಕೃತಿಯ ರಹಸ್ಯಗಳನ್ನು ಉದ್ಘಾಟಿಸುವುದರಲ್ಲಿಯೇ ಪರಮಾನಂದ ಭರಿತರಾಗುತ್ತಾರೆ.

ಯಾವುದೋ ಪಟ್ಟಣವೊಂದರಲ್ಲಿ ಖಗೋಳವಿಜ್ಞಾನಿಯೊಬ್ಬನಿದ್ದನು. ಆಕಾಶಕಾಯಗಳ ಅಧ್ಯಯನದಲ್ಲಿಯೇ ಅವನು ಸಂತೋಷವನ್ನು ತುಂಬಿಕೊಳ್ಳುತ್ತಿದ್ದನು. ಬಡವನಾಗಿದ್ದುದರಿಂದ ಮದುವೆಯಾಗುವ ಗೋಜಿಗೂ ಹೋಗದೇ ಏಕಾಂಗಿಯಾಗಿ ಆತ್ಮಾರಾಮನಾಗಿಬಿಟ್ಟಿದ್ದನು. ಸರಳವಾದ ಜೀವನವನ್ನು ಅವನು ತನ್ನದಾಗಿಸಿಕೊಂಡಿದ್ದನು. ಒಂದು ದಿನ ಅವನು ಪಟ್ಟಣದ ಹೊರವಲಯದ ಬೆಟ್ಟವೊಂದರ ಮೇಲೆ ರಾತ್ರಿಯ ವೇಳೆಯಲ್ಲಿ ಒಬ್ಬನೇ ಕುಳಿತು, ಆಕಾಶವನ್ನೇ ಏಕಾಗ್ರಮನಸ್ಕನಾಗಿ ನೋಡುತ್ತ, ನಕ್ಷತ್ರಗಳ ಗತಿಯನ್ನು ಪರಿವೀಕ್ಷಿಸುತ್ತಿದ್ದನು. ಬಾಹ್ಯಜಗತ್ತಿನ ಪ್ರಜ್ಞೆಯೇ ಇಲ್ಲದೆ ಅದರಲ್ಲಿಯೇ ಮೈಮರೆತಿದ್ದನು. ಆ ಹೊತ್ತಿಗೆ ಸರಿಯಾಗಿ ನಾಯಿಯೊಂದು ಬೆಟ್ಟವೇರಿ ಬಂದಿತು. ಎತ್ತರವಾದ ಬಂಡೆಯ ಮೇಲೆ ಕುಳಿತಿದ್ದ ವಿಜ್ಞಾನಿಯನ್ನು ಕಂಡು, “ಏನಯ್ಯಾ ಇದು, ಹೀಗೆ ಒಬ್ಬನೇ ಕುಳಿತು ಆಕಾಶವನ್ನು ನೋಡುತ್ತಿದ್ದೀಯಲ್ಲಾ, ನಿನಗೇನಾದರೂ ಹುಚ್ಚುಹಿಡಿದಿದೆಯೋ ಹೇಗೆ” ಎಂದು ಝುಂಕಿಸಿತು.

ವಿಜ್ಞಾನಿಯು ಆ ಮಾತನ್ನು ಕೇಳಿಸಿಕೊಂಡರೂ ಏನೊಂದೂ ಉತ್ತರಕೊಡದೆ ಮೌನವಾಗಿಯೇ ಇದ್ದನು. ಆಗ ಮತ್ತೆ ಆ ಸೊಣಗವು ವಿಜ್ಞಾನಿಯನ್ನು ಕೆಣಕುತ್ತಾ, “ಮದುವೆಯನ್ನೂ ಮಾಡಿಕೊಳ್ಳದೆ ಹೀಗೆ ಒಂಟಿಬಡುಕನಾಗಿರುತ್ತಾರೆಯೇ, ನನಗಾದರೋ ಹೆಂಡತಿಯಿದ್ದಾಳೆ, ಮಕ್ಕಳಿದ್ದಾರೆ, ಹೀಗಲ್ಲವೇ ಸಂತೋಷವಾಗಿರಬೇಕಾದ್ದು” ಎಂದು ಹಂಗಿಸಿತು. ಆಗ ವಿಜ್ಞಾನಿಯು ತನ್ನ ಮೌನವನ್ನು ಮುರಿಯುತ್ತ, “ನನ್ನ ಪ್ರೀತಿಯ ಶ್ವಾನರಾಜನೇ, ನಿನ್ನ ಸುಖವೆಲ್ಲ ನಿನ್ನ ಇಂದ್ರಿಯಗಳಲ್ಲಿದೆ. ಅವುಗಳ ಮೂಲಕ ನೀನು ಆನಂದಿಸುತ್ತೀಯೆ. ಇಂದ್ರಿಯಗಳಿಗೆ ಮೀರಿದ ಆನಂದವೂ ಇದೆಯೆಂಬುದು ನಿನಗೆ ಗೊತ್ತಿಲ್ಲ. ಆದರೆ ನಾನಾದರೋ ನಕ್ಷತ್ರಗಳ ವೀಕ್ಷಣೆಯಿಂದ ಇಂದ್ರಿಯಗಳಿಗೂ ಮೀರಿದ ಆನಂದವನ್ನು ಅನುಭವಿಸುತ್ತಿದ್ದೇನೆ. ನಿನ್ನ ದೃಷ್ಟಿಯಿಂದ ಯಾವುದು ಆನಂದವೋ ಅದನ್ನು ಹುಡುಕಿ ಪಡೆದುಕೊಳ್ಳಲು ನಿನಗೆ ಅಧಿಕಾರವಿದೆ. ಹಾಗೆಯೇ ನನ್ನ ದೃಷ್ಟಿಯಿಂದ ಯಾವುದು ಆನಂದವೋ ಅದನ್ನು ಹುಡುಕಿ ಪಡೆದುಕೊಳ್ಳಲು ನನಗೆ ಅಧಿಕಾರವಿದೆ. ಹಾಗಿರುವಾಗ ನನ್ನನ್ನೇಕೆ ಹೀಯಾಳಿಸುತ್ತೀಯೆ” ಎಂದು ದಬಾಯಿಸಿ ಮಾತನಾಡಿದನು. ಆ ಮಾತಿಗೇನೂ ಉತ್ತರ ಕೊಡಲಾರದೆ ನಾಯಿ ಬೆಟ್ಟದಿಂದ ಕೆಳಕ್ಕಿಳಿದು ಹೊರಟುಹೋಯಿತು.

ನಾಯಿಯು ಅನ್ನಾಹಾರಗಳನ್ನುಂಡು ಅದುವೇ ಪರಮಸುಖವೆನ್ನುವುದಾದರೆ, ವಿಜ್ಞಾನಿಯು ಆ ಮಟ್ಟಕ್ಕೆ ಇಳಿಯಬಾರದು. ವಿಜ್ಞಾನಿಯ ಆನಂದದ ಮಟ್ಟಕ್ಕೆ ನಾಯಿ ಏರಲಾರದು.